**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 2509/2021</u>**

<u>ಪಿರ್ಯಾದುದಾರರು</u> ಃ ಸರ್ಕಾರದ ಪರವಾಗಿ ಬೀರೂರು ಪೊಲೀಸರಿಂದ

-ವಿರುದ್ಧ-

<u>ಆರೋಪಿತರು</u> ಃ ಮಂಜುನಾಥ ಮತ್ತು ಇತರರು

**<u>-ಃ ದೋಷಾರೋಪಣೆಃ-</u>**

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ., ಎಲ್. ಎಲ್.ಎಲ್.ಬಿ., 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1. ಮಂಜುನಾಥ ಬಿನ್ ಶಂಕರಪ್ಪ 41 ವರ್ಷ, ಹೋಟೆಲ್ ವ್ಯಾಪಾರ
2. ಜಯಣ್ಣ ಬಿನ್ ಸಿದ್ದಪ್ಪ, 61 ವರ್ಷ, ವ್ಯವಸಾಯ,
3. ನವೀನ ಬಿನ್ ಮಂಜುನಾಥ, 21 ವರ್ಷ, ವ್ಯವಸಾಯ,
4. ನಾಗರಾಜು ಬಿನ್ ಮಂಜುನಾಥ, 23 ವರ್ಷ, ವ್ಯವಸಾಯ,
5. ಸರೋಜಮ್ಮ ಕೋಂ ಮಂಜುನಾಥ, 39 ವರ್ಷ, ವ್ಯವಸಾಯ,
6. ವಿಶ್ವನಾಥ ಬಿನ್ ಮಂಜುನಾಥ, 19 ವರ್ಷ, ವ್ಯವಸಾಯ,

ವಾಸ ಹೋಗರೆಹಳ್ಳಿ ಗ್ರಾಮ, ಕಡೂರು ತಾಲ್ಲೂಕು.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಮಾಡುವುದೇನೆಂದರೆಃ

ದಿನಾಂಕ 30-05-2021 ರಂದು ಬೆಳಗ್ಗೆ 5 ರ ಸಮಯದಲ್ಲಿ ಬೀರೂರು ಠಾಣಾ ವ್ಯಾಪ್ತಿ ಹೋಗರೆಹಳ್ಳಿ ಗ್ರಾಮದ ಚಾಸಾ-4 ತಾರಾನಾಥರವರಿಗೆ ಸೇರಿದ ಸರ್ವೇ ಸಂಖ್ಯೆ 173/1 ರ ಜಮೀನಿಗೆ 1 ರಿಂದ 6 ನೇ ಆರೋಪಿಗಳಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು ಕಾನೂನು ಬಾಹೀರ ಸಂಘಟನೆಯ ಸದಸ್ಯರಾಗಿರುತ್ತೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 143 ಸಹ ಕಲಂ 149 ರ ರೀತ್ಯಾ ಅಪರಾಧವನ್ನು, ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ 1 ರಿಂದ 6 ನೇ ಆರೋಪಿತರಾದ ನೀವು ಏಕೋದ್ದೇಶದಿಂದ ದೊಂಬಿ ಮಾಡುವ ಸಲುವಾಗಿ

ಅಕ್ರಮಕೂಟವನ್ನು ಕಟ್ಟಿದ್ದೀರಿ ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 147 ಸಹ ಕಲಂ 149ರ ರೀತ್ಯಾ ಅಪರಾಧವನ್ನು, ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ 1 ರಿಂದ 6ನೇ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಕೈಯಲ್ಲಿ ಮಾರಾಕಾಸ್ತ್ರಗಳಾದ ಕತ್ತಿಗಳನ್ನು ಹಿಡಿದುಕೊಂಡು ಬಂದು ಚಾಸಾ-1 ರಿಂದ 4 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದ್ದೀರಿ ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 447 ಸಹ ಕಲಂ 149ರ ರೀತ್ಯಾ ಅಪರಾಧವನ್ನು, ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನಾಲ್ಕನೇಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ 1 ರಿಂದ 6 ನೇ ಆರೋಪಿತರಾದ ನೀವು ಏಕೋದ್ದೇಶದಿಂದ ಚಾಸಾ-1 ರಿಂದ 4ರವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದು, ಸಾರ್ವಜನಿಕ ನೆಮ್ಮದಿಗೆ ಶಾಂತಿಭಂಗವನ್ನುಂಟು ಮಾಡಿ, ಅವರು ಯಾವುದಾದರೊಂದು ಅಪರಾಧಿಕ ಕೃತ್ಯವನ್ನು ಎಸಗುವಂತೆ ಪ್ರಚೋದಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 504 ಸಹ ಕಲಂ 149ರ ರೀತ್ಯಾ ಅಪರಾಧವನ್ನು, ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಐದನೇಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ 1 ರಿಂದ 6 ನೇ ಆರೋಪಿತರಾದ ನೀವು ಏಕೋದ್ದೇಶದಿಂದ, ಚಾಸಾ-1 ರಿಂದ 3ರವರಿಗೆ ಕೈಯಿಂದ ಹೊಡೆದು ನೋವುಂಟು ಮಾಡಿರುತ್ತೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 323 ಸಹ ಕಲಂ 149ರ ರೀತ್ಯಾ ಅಪರಾಧವನ್ನು, ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಆರನೇಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ 1 ರಿಂದ 6 ನೇ ಆರೋಪಿತರಾದ ನೀವು ಏಕೋದ್ದೇಶದಿಂದ, ಚಾಸಾ-1 ರಿಂದ 3ರವರನ್ನು ಸಾರ್ವಜನಿಕ ಸ್ಥಳದಲ್ಲಿ ಹಿಡಿದು ಎಳೆದಾಡಿ, ಅವರ ಮಾನಕ್ಕೆ ಹಾನಿಯುಂಟು ಮಾಡಿದ್ದೀರಿ. ಆ

ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 354 ಸಹ ಕಲಂ 149 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ 1 ರಿಂದ 6 ನೇ ಆರೋಪಿತರಾದ ನೀವು ಏಕೋದ್ದೇಶದಿಂದ, 1 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಮಾರಕಾಸ್ತ್ರವಾದ ಕತ್ತಿಯಿಂದ ಹೊಡೆಯಲು ಬಂದಿದ್ದು, 4 ನೇ ಆರೋಪಿಯಾದ ನೀವು ಚಾಸಾ-2 ರವರ ಬಲಕೈಗೆ ಮಾರಕಾಸ್ತ್ರವಾದ ಮಚ್ಚಿನಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, 3 ನೇ ಆರೋಪಿಯಾದ ನೀವು ಚಾಸಾ-3 ರವರಿಗೆ ಮಾರಕಾಸ್ತ್ರವಾದ ಕಲ್ಲುಗಳಿಂದ ಮೈಕೈಗೆ ಹೊಡೆದು 2 ನೇ ಆರೋಪಿಯಾುದ ನೀವು ಬಿದರಿನ ಕೋಲಿನಿಂದ ಚಾಸಾ-3 ರವರಿಗೆ ಹೊಡೆದು ನೋವುಂಟು ಮಾಡಿದ್ದೀರಿ. ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ 324 ಸಹ ಕಲಂ 149 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 23.12.2022

ಸಹಿ/-

**(ಸವಿತರಾಣಿ ಹೆಚ್.ವಿ.)**

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಡೂರು.

**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,**
ಕಡೂರು.

**ಸಿ.ಸಿ. 2509/2021**

ಆರೋಪಿ ಸಂಖ್ಯೆ ಃ1
ಆಪಾದಿತರ ಹೆಸರು ಃ ಮಂಜುನಾಥ
ತಂದೆಯ ಹೆಸರು ಃ ಶಂಕರಪ್ಪ
ವಯಸ್ಸು ಃ 41 ವರ್ಷ,
ಉದ್ಯೋಗ ಃ ಹೋಟೆಲ್ ವ್ಯಾಪಾರ
ವಾಸಸ್ಥಳ ಃ ಹೋಗರೆಹಳ್ಳಿ ಗ್ರಾಮ, ಕಡೂರು ತಾಲ್ಲೂಕು.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ಅಡಿ ಪ್ರಕಾರ ಆರೋಪಿಯ ಹೇಳಿಕೆಃ**

ಪ್ರಃ 1) ನಿಮಗೆ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃಹೌದು
ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ?
ಉಃಇಲ್ಲ ವಿಚಾರಣೆಯಾಗಬೇಕು.

ಮೇಲಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ದಾಖಲಿಸಿಕೊಂಡಿದ್ದು, ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆಂದು ಈ ಮೂಲಕ ಧೃಡೀಕರಿಸುತ್ತೇನೆ.

ಸಹಿ/-
3 ನೇ ಹೆಚ್ಚುವರಿ ಪ್ರಃದಃನ್ಯಾಃದಂಃಕಡೂರು.

**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,**
ಕಡೂರು.

**ಸಿ.ಸಿ. 2509/2021**

ಆರೋಪಿ ಸಂಖ್ಯೆ ಃ2
ಆಪಾದಿತರ ಹೆಸರು ಃ ಜಯಣ್ಣ
ತಂದೆಯ ಹೆಸರು ಃ ಸಿದ್ದಪ್ಪ
ವಯಸ್ಸು ಃ 61 ವರ್ಷ,
ಉದ್ಯೋಗ ಃ ವ್ಯವಸಾಯ
ವಾಸಸ್ಥಳ ಃ ಹೋಗರೆಹಳ್ಳಿ ಗ್ರಾಮ, ಕಡೂರು ತಾಲ್ಲೂಕು.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ಅಡಿ ಪ್ರಕಾರ ಆರೋಪಿಯ ಹೇಳಿಕೆಃ**

ಪ್ರಃ 1) ನಿಮಗೆ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃಹೌದು
ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ?
ಉಃಇಲ್ಲ ವಿಚಾರಣೆಯಾಗಬೇಕು.

ಮೇಲಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ದಾಖಲಿಸಿಕೊಂಡಿದ್ದು, ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆಂದು ಈ ಮೂಲಕ ಧೃಡೀಕರಿಸುತ್ತೇನೆ.

ಸಹಿ/-
3 ನೇ ಹೆಚ್ಚುವರಿ ಪ್ರಃದಃನ್ಯಾಃದಂಃಕಡೂರು.

<u>3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,</u>
ಕಡೂರು.

**<u>ಸಿ.ಸಿ. 2509/2021</u>**

ಆರೋಪಿ ಸಂಖ್ಯೆ ಃ3
ಆಪಾದಿತರ ಹೆಸರು ಃ ನವೀನ
ತಂದೆಯ ಹೆಸರು ಃ ಮಂಜುನಾಥ
ವಯಸ್ಸು ಃ 21 ವರ್ಷ
ಉದ್ಯೋಗ ಃ ವ್ಯವಸಾಯ
ವಾಸಸ್ಥಳ ಃ ಹೋಗರೆಹಳ್ಳಿ ಗ್ರಾಮ, ಕಡೂರು ತಾಲ್ಲೂಕು.

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ಅಡಿ ಪ್ರಕಾರ ಆರೋಪಿಯ ಹೇಳಿಕೆಃ</u>

ಪ್ರಃ 1) ನಿಮಗೆ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃಹೌದು
ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ?
ಉಃಇಲ್ಲ ವಿಚಾರಣೆಯಾಗಬೇಕು.

ಮೇಲಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ದಾಖಲಿಸಿಕೊಂಡಿದ್ದು, ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆಂದು ಈ ಮೂಲಕ ಧೃಡೀಕರಿಸುತ್ತೇನೆ.

ಸಹಿ/-
3 ನೇ ಹೆಚ್ಚುವರಿ ಪ್ರಃದಃನ್ಯಾಃದಂಃಕಡೂರು.

<u>3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,</u>
ಕಡೂರು.

**<u>ಸಿ.ಸಿ. 2509/2021</u>**

ಆರೋಪಿ ಸಂಖ್ಯೆ ಃ4
ಆಪಾದಿತರ ಹೆಸರು ಃ ನಾಗರಾಜು
ತಂದೆಯ ಹೆಸರು ಃ ಮಂಜುನಾಥ
ವಯಸ್ಸು ಃ 23 ವರ್ಷ,
ಉದ್ಯೋಗ ಃ ವ್ಯವಸಾಯ
ವಾಸಸ್ಥಳ ಃ ಹೋಗರೆಹಳ್ಳಿ ಗ್ರಾಮ, ಕಡೂರು ತಾಲ್ಲೂಕು.

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ಅಡಿ ಪ್ರಕಾರ ಆರೋಪಿಯ ಹೇಳಿಕೆಃ</u>

ಪ್ರಃ 1) ನಿಮಗೆ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃಹೌದು
ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ?
ಉಃಇಲ್ಲ ವಿಚಾರಣೆಯಾಗಬೇಕು.

ಮೇಲಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ದಾಖಲಿಸಿಕೊಂಡಿದ್ದು, ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆಂದು ಈ ಮೂಲಕ ಧೃಡೀಕರಿಸುತ್ತೇನೆ.

ಸಹಿ/-
3 ನೇ ಹೆಚ್ಚುವರಿ ಪ್ರಃದಃನ್ಯಾಃದಂಃಕಡೂರು.

**<u>3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,</u>**
ಕಡೂರು.

**<u>ಸಿ.ಸಿ. 2509/2021</u>**

ಆರೋಪಿ ಸಂಖ್ಯೆ ಃ5
ಆಪಾದಿತರ ಹೆಸರು ಃ ಸರೋಜಮ್ಮ
ಗಂಡನ ಹೆಸರು ಃ ಮಂಜುನಾಥ
ವಯಸ್ಸು ಃ 39 ವರ್ಷ,
ಉದ್ಯೋಗ ಃ ವ್ಯವಸಾಯ
ವಾಸಸ್ಥಳ ಃ ಹೋಗರೆಹಳ್ಳಿ ಗ್ರಾಮ, ಕಡೂರು ತಾಲ್ಲೂಕು.

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ಅಡಿ ಪ್ರಕಾರ ಆರೋಪಿಯ ಹೇಳಿಕೆಃ</u>

ಪ್ರಃ 1) ನಿಮಗೆ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃಹೌದು
ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ?
ಉಃಇಲ್ಲ ವಿಚಾರಣೆಯಾಗಬೇಕು.

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ದಾಖಲಿಸಿಕೊಂಡಿದ್ದು, ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆಂದು ಈ ಮೂಲಕ ಧೃಡೀಕರಿಸುತ್ತೇನೆ.

ಸಹಿ/-
3 ನೇ ಹೆಚ್ಚುವರಿ ಪ್ರಃದಃನ್ಯಾಃದಂಃಕಡೂರು.

**<u>3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,</u>**
ಕಡೂರು.

**<u>ಸಿ.ಸಿ. 2509/2021</u>**

ಆರೋಪಿ ಸಂಖ್ಯೆ ಃ6
ಆಪಾದಿತರ ಹೆಸರು ಃ ವಿಶ್ವನಾಥ
ತಂದೆಯ ಹೆಸರು ಃ ಮಂಜುನಾಥ
ವಯಸ್ಸು ಃ 19 ವರ್ಷ
ಉದ್ಯೋಗ ಃ ವಿದ್ಯಾರ್ಥಿ
ವಾಸಸ್ಥಳ ಃ ಹೋಗರೆಹಳ್ಳಿ ಗ್ರಾಮ, ಕಡೂರು ತಾಲ್ಲೂಕು.

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ಅಡಿ ಪ್ರಕಾರ ಆರೋಪಿಯ ಹೇಳಿಕೆಃ</u>

ಪ್ರಃ 1) ನಿಮಗೆ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃಹೌದು
ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೆ?
ಉಃಇಲ್ಲ ವಿಚಾರಣೆಯಾಗಬೇಕು.

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ದಾಖಲಿಸಿಕೊಂಡಿದ್ದು, ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿರುತ್ತೇನೆಂದು ಈ ಮೂಲಕ ಧೃಡೀಕರಿಸುತ್ತೇನೆ.

ಸಹಿ/-
3 ನೇ ಹೆಚ್ಚುವರಿ ಪ್ರಃದಃನ್ಯಾಃದಂಃಕಡೂರು.